


# ಕಳೆದ ದಿನಗಳ ನೆನಪುಗಳು

(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)




ಮೂಲ ಬಂಗಾಳಿ: ಸ್ವಾಮಿ ಶ್ರದ್ಧಾನಂದ

ಅನುವಾದ: ಪ್ರವ್ರಾಜಿಕಾ ಯೋಗಾತ್ಮಪ್ರಾಣಾ


## ಭಾಗ ೧೨

೧೮೯೭ರ ಕೊನೆಯ ಭಾಗದಲ್ಲಿ ಸ್ವಾಮೀಜಿಯವರು ಸ್ವಾಮಿ ವಿರಜಾನಂದರನ್ನೂ ದುರ್ಭಿಕ್ಷದ ಸೇವಾಕಾರ್ಯಕ್ಕಾಗಿ ದೇವಘರ್‌ಗೆ ಕಳುಹಿಸಿದರು. ದೇವಘರ್‌ನಲ್ಲಿ ಆಗ ಶ್ರೀರಾಮಕೃಷ್ಣರ ಭಕ್ತರಾದ ಪ್ರಿಯನಾಥ ಮುಖ್ಯೋಪಾಧ್ಯಾಯ ವಾಸವಾಗಿದ್ದರು. ಸ್ವಾಮಿ ವಿರಜಾನಂದರು ಅವರ ಮನೆಯಲ್ಲಿ ಒಂದು ಕೇಂದ್ರವನ್ನು ಸ್ಥಾಪಿಸಿ, ದುರ್ಭಿಕ್ಷದಿಂದ ಪೀಡಿತರಾದವರಿಗೆ ಜೋಳದ ಹಿಟ್ಟು ಮತ್ತು ಉಪ್ಪನ್ನು ವಿತರಿಸುವ ವ್ಯವಸ್ಥೆಯನ್ನು ಮಾಡಿದರು. ಹಳ್ಳಿ ಹಳ್ಳಿಗಳಲ್ಲಿ ತಿರುಗಾಡಿ ಬರಪೀಡಿತರಿಗೆ ವಿತರಣಾ ಚೀಟಿಯನ್ನು ಕೊಡುತ್ತಿದ್ದರು. ಖ್ಯಾತ ವಿದ್ವಾಂಸರಾದ ರಾಜನಾರಾಯಣ ಬಸು ಆಗ ಆಂಶಿಕ ಪಾರ್ಶ್ವವಾಯು ಪೀಡಿತರಾಗಿ ದೇವಘರ್‌ನಲ್ಲಿದ್ದರು. ಅವರ ಕೊನೆಯ ಮಗ ಮಣೀಂದ್ರನಾಥರು ಸ್ವಾಮಿ ವಿರಜಾನಂದರಿಗೆ ಈ ಸೇವಾಕಾರ್ಯದಲ್ಲಿ ತುಂಬ ಸಹಾಯ ಮಾಡಿದ್ದರು. ಮಣೀಂದ್ರನಾಥರೊಂದಿಗೆ ಒಂದು ದಿನ ಸ್ವಾಮಿ ವಿರಜಾನಂದರು ರಾಜನಾರಾಯಣ ಬಸುವನ್ನು ನೋಡಲು ಹೋದರು. ಸ್ವಾಮಿ ವಿರಜಾನಂದರು ಸ್ವಾಮೀಜಿಯವರ ಶಿಷ್ಯರೆಂದೂ, ಈಗ ನಿರ್ಗತಿಕರ ಸೇವಾರ್ಥವಾಗಿ ಬಂದಿದ್ದಾರೆಂದೂ ತಿಳಿದು ಬಸು ಮಹಾಶಯರು ತುಂಬ ಆತ್ಮೀಯತೆಯಿಂದ ಬಹಳ ಹೊತ್ತಿನವರೆಗೆ ಅವರೊಂದಿಗೆ ಮಾತನಾಡಿದ್ದರು. ಸ್ವಾಮಿ ವಿರಜಾನಂದರು ದೇವಘರದ ಸೇವಾಕಾರ್ಯವನ್ನು ತುಂಬ ವ್ಯವಸ್ಥಿತವಾದ ರೀತಿಯಲ್ಲಿ ೨-೩ ತಿಂಗಳ ಕಾಲ ನಡೆಸಿದರು; ಜನಸಾಮಾನ್ಯರ ಹಾಗೂ ಸರ್ಕಾರದ ಪ್ರಶಂಸೆಗೆ ಪಾತ್ರರಾದರು. ಅವರು ದೇವಘರದಿಂದ ಹಿಂತಿರುಗಿದಾಗ ಅವರಿಗೆ ಧನ್ಯವಾದಗಳನ್ನು ಸಮರ್ಪಿಸಲು ಡೆಪ್ಯುಟಿ ಕಮಿಷನ್ನರ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನು ಕರೆಯಲಾಗಿತ್ತು. ದೇವಘರದಲ್ಲಿ ಪ್ರಿಯನಾಥ ಮುಖ್ಯೋಪಾಧ್ಯಾಯರು ತಮ್ಮ ಮನೆಯಲ್ಲಿ ಸ್ವಾಮಿ ವಿರಜಾನಂದರನ್ನು ತುಂಬ ಆದರದಿಂದ ನೋಡಿಕೊಂಡಿದ್ದರು. ಅಲ್ಲಿದ್ದಾಗ ಕಠಿಣ ಪರಿಶ್ರಮವಿದ್ದರೂ, ೨-೩ ತಿಂಗಳಲ್ಲಿ ಸ್ವಾಮಿ ವಿರಜಾನಂದರ ಆರೋಗ್ಯ ಬಹಳಷ್ಟು ಸುಧಾರಿಸಿತ್ತು. ಮಠಕ್ಕೆ ಹಿಂತಿರುಗಿದಾಗ, 'ಅಬ್ಬಬ್ಬಾ! ಹೇಗಾಗಿದೆ ನಮ್ಮ famine relief (ಬರ ಪರಿಹಾರ) ಕಾರ್ಯಕರ್ತನ ಚಹರೆ!' ಎಂದು ಎಲ್ಲರೂ ಛೇಡಿಸುತ್ತಿದ್ದರು.

ಆಲಂಬಜಾರ್ ಮಠದಲ್ಲಿ ಹರಿ ಮಹಾರಾಜರು ಹೊಸ ಸಾಧು-ಬ್ರಹ್ಮಚಾರಿಗಳಿಗೆ ಶಾಸ್ತ್ರಾದಿಗಳನ್ನು ಅರ್ಥೈಸುತ್ತಿದ್ದರು. ಬೆಳಗ್ಗೆ-ಸಂಜೆ ಒಟ್ಟಾಗಿ ಕುಳಿತು ಧ್ಯಾನ ಮಾಡುತ್ತಿದ್ದರು; ಸ್ತೋತ್ರಗಳನ್ನು ಕಂಠಪಾಠ ಮಾಡುವುದು, ಅದನ್ನು ಛಂದಸ್ಸಿಗನುಗುಣವಾಗಿ ಪುನರಾವೃತ್ತಿ ಮಾಡುವುದು ಮುಂತಾದವುಗಳನ್ನು ಕಲಿಸಿಕೊಡುತ್ತಿದ್ದರು. 'ಭಾಷಾಪರಿಚ್ಛೇದ' (ಒಂದು ನ್ಯಾಯ- ವೈಶೇಷಿಕ ಗ್ರಂಥ) ಪಾಠ ಮಾಡುವಾಗ, ಕಾಳೀಕೃಷ್ಣರಿಗೆ ಅದು ಸ್ವಲ್ಪವೂ ತಲೆಗೆ ಹತ್ತುತ್ತಿರಲಿಲ್ಲ; ನೆನಪಿನಲ್ಲೂ ಉಳಿಯುತ್ತಿರಲಿಲ್ಲ. ಮಠದ ಒಳಭಾಗದಲ್ಲಿ ಕೆಳ ಅಂತಸ್ತಿಗೆ ಹೋಗುವ ಮೆಟ್ಟಿಲ ಪಕ್ಕದಲ್ಲಿ ಸ್ವಲ್ಪ ಸ್ಥಳವಿತ್ತು. ಕಾಳೀ ಕೃಷ್ಣರು ಮಧ್ಯಾಹ್ನ ಊಟದ ನಂತರ ಅಲ್ಲಿ ಕುಳಿತು ಕ್ಲಾಸಿನಲ್ಲಾದ ಟೀಕೆಯ ವ್ಯಾಖ್ಯೆಯನ್ನು ತಿಳಿದುಕೊಳ್ಳಲು ಪುನರಾವೃತ್ತಿ ಮಾಡುತ್ತಿದ್ದರು. ಹರಿ ಮಹಾರಾಜರು ಅದನ್ನು ಕಂಡು ಮೆಟ್ಟಿಲನ್ನು ಹತ್ತಿ ಇಳಿಯುವಾಗಲೆಲ್ಲ ಅವರ ಹತ್ತಿರ ಬಂದು, ಅವರಿಗೆ ತಿಳಿಯುವಂತೆ ಪ್ರತ್ಯೇಕವಾಗಿ ಹೇಳಿಕೊಡುತ್ತಿದ್ದರು.[೧]

೧೮೯೭ರ ಜೂನ್ ತಿಂಗಳಲ್ಲಿ ಭೂಕಂಪದಿಂದಾಗಿ ಆಲಂಬಜಾರಿನ ಮಠಕ್ಕೆ ಬಹಳ ಹಾನಿಯಾಯಿತು. ಆದ್ದರಿಂದ ಆಲಂಬಜಾರಿನಿಂದ ಮಠವನ್ನು ಬೇಲೂರಿನ ನೀಲಾಂಬರ್ ಮುಖ್ಯೋಪಾಧ್ಯಾಯರ ತೋಟದ ಮನೆಗೆ ವರ್ಗಾಯಿಸಲಾಯಿತು (೧೩ ಫೆಬ್ರುವರಿ, ೧೮೯೮). ಆಲಂಬಜಾರಿನಲ್ಲಿ ಮತ್ತು ಇಲ್ಲಿ ಪ್ರತಿ ಭಾನುವಾರ ಸರದಿಯಂತೆ ಒಬ್ಬೊಬ್ಬರು, ಮಠದ ಸಾಧುಗಳ ಮುಂದೆ, ತಾನೇ ಒಂದು ವಿಷಯವನ್ನು ಆರಿಸಿಕೊಂಡು ಭಾಷಣ ನೀಡಬೇಕಾಗುತ್ತಿತ್ತು; ಇಲ್ಲವೇ ಪ್ರಬಂಧವನ್ನು ಓದಬೇಕಾಗುತ್ತಿತ್ತು. ಹರಿ ಮಹಾರಾಜರು ಸ್ವಾಮಿ ವಿರಜಾನಂದರ ಮಾತಿನ ಶೈಲಿಯನ್ನು ಪ್ರಶಂಸಿಸುತ್ತಿದ್ದರು. ಒಮ್ಮೆ ಬಲರಾಮ ಬಾಬುವಿನ ಮನೆಯಲ್ಲಿ ಸ್ವಾಮೀಜಿಯವರೊಂದಿಗೆ ಎಲ್ಲರೂ ಕುಳಿತಿದ್ದಾಗ, ಸ್ವಾಮೀಜಿಯವರು ಹಠಾತ್ತಾಗಿ ಒಬ್ಬೊಬ್ಬರನ್ನೇ ಹೆಸರು ಹಿಡಿದು ಕರೆದು, ತಕ್ಷಣಕ್ಕೆ

---

೧ ಆಲಂಬಜಾರ್ ಮಠಕ್ಕೆ ಬಂದ ಮೇಲೆ ಹರಿ ಮಹಾರಾಜರು ಬಹಳ ಅಂತರ್ಮುಖರಾಗಿರುತ್ತಿದ್ದರು. ಅವರು ಪರಿವ್ರಾಜಕ ದಿನಗಳನ್ನು ಮುಗಿಸಿದ ನಂತರ ಮಠಕ್ಕೆ ಮರಳುವ ವಿಷಯವಾಗಿ ಮಾತುಕತೆ ನಡೆಯುತ್ತಿದ್ದಾಗ ಒಮ್ಮೆ ಶಶಿ ಮಹಾರಾಜರು ನನಗೆ ಹೇಳಿದರು: ''ಅವರು ಎಂಥ ಸಿದ್ಧ ಮಹಾಪುರುಷರಾಗಿದ್ದಾರೆ ಅಂತ ನೀನೇ ನೋಡು.'' ಮೊದಮೊದಲು ಹರಿ ಮಹಾರಾಜರ ಬಳಿಗೆ ಹೋಗಲು ನಾನು ಹಿಂಜರಿಯುತ್ತಿದ್ದೆ. ಆದರೆ ಕ್ರಮೇಣ ಅವರು ಎಷ್ಟೊಂದು ಆತ್ಮೀಯತೆ, ಸ್ನೇಹಭಾವಗಳಿಂದ ನನ್ನನ್ನು ಕಂಡರು ಎಂದರೆ, ಬಿಡುವಾದಾಗಲೆಲ್ಲ ಅವರೊಂದಿಗೆ ಒಡನಾಡುತ್ತಿದ್ದೆ, ಅವರೊಂದಿಗೆ ಮಾತನಾಡುತ್ತಿದ್ದೆ, ಅವರ ಸೇವೆ ಮಾಡುತ್ತಿದ್ದೆ. *('ವಿರಜಾನಂದರ ಸ್ಮೃತಿ'ಯಿಂದ)*

ಅವರ ಮನಸ್ಸಿಗೆ ಯಾವ ವಿಚಾರ ಬರುವುದೋ ಅದನ್ನು ಕುರಿತು ಅಲ್ಲೇ ನಿಂತು ಮಾತನಾಡಲು ಆದೇಶಿಸಿದರು. ಏನೂ ತಯಾರಿಲ್ಲದೆ, ಅದೂ ಸ್ವಾಮೀಜಿಯವರ ಸಮ್ಮುಖದಲ್ಲಿ ಏನು ಮಾತಾಡುವುದು ಎಂದು ಕಾಳೀಕೃಷ್ಣರ ಎದೆಯು ಡಬಡಬ ಹೊಡೆದುಕೊಳ್ಳಲಾರಂಭಿಸಿತು. ಅವರ ಸರದಿ ಬಂದಾಗ ಹೇಗೋ ಎದ್ದು ನಿಂತು ೪-೫ ನಿಮಿಷ ಮಾತಾಡಿದರು. ಏನು ಮಾತಾಡುತ್ತಿರುವೆ ಎಂಬುದರ ಬಗ್ಗೆ ಅವರಿಗೆ ಅರಿವೇ ಇರಲಿಲ್ಲ. ಆದರೆ ಮುಗಿಸಿದಾಗ ಸ್ವಾಮೀಜಿಯವರು 'ಭೇಷ್' ಎಂದು ಶ್ಲಾಘಿಸಿದರು.

## ಪ್ರಾಸಂಗಿಕ ಸ್ಮೃತಿ

''ಒಮ್ಮೆ ಆಲಂಬಜಾರಿನ ಮಠದಲ್ಲಿ ಈ ತರಹದ ಒಂದು ಸಂದರ್ಭದಲ್ಲಿ (೧೨ ಜೂನ್, ೧೮೯೭) ಸ್ವಾಮಿ ಸುಬೋಧಾನಂದರು (ಖೋಕಾ ಮಹಾರಾಜ್) ಮಾತಾಡಲು ಪ್ರಾರಂಭಿಸುತ್ತಿದ್ದಂತೆಯೇ ಭೀಕರ ಭೂಕಂಪವಾಯಿತು. ಅದೇ ೧೮೯೭ರ ಬಂಗಾಳ-ಅಸ್ಸಾಮಿನ ಭೀಷಣ, ಲೋಕಕ್ಷಯಕಾರಿ ಭೂಕಂಪ! ಯಾರಾರು ಎಲ್ಲೆಲ್ಲಿ ದ್ದೆವೋ ಎಲ್ಲರೂ ಉಸಿರು ಬಿಗಿಹಿಡಿದು, ಓಡಿ ಹೋಗಿ ರಸ್ತೆಯಲ್ಲಿ ನಿಂತೆವು. ಪೂಜನೀಯ ರಾಖಾಲ್ ಮಹಾರಾಜರಂತೂ ಥರ ಥರ ನಡುಗುತ್ತಿದ್ದರು. ಈ ಅವಸ್ಥೆಯಲ್ಲಿದ್ದ ಅವರನ್ನು ಕೆಲವರು ಹಿಡಿದುಕೊಂಡು ಮಠದ ಹೊರಕ್ಕೆ ಕರೆತಂದು ನಿಲ್ಲಿಸಿದರು. ನಾಲ್ಕು ದಿಕ್ಕೂ ರೊಯ್ಯನೆ ತೂಗುತ್ತಿರುವಂತಿತ್ತು, ಭೂಮಿ ಕಾಲ ಕೆಳಗಿನಿಂದ ಸರಿದು ಹೋಗುವಂತಿತ್ತು, ಮುಂದಿನ ಮನೆಯ ಬೃಹತ್ ಕಂಬಗಳ ಮೇಲ್ಭಾಗವು ಮುರಿದು ಬೀಳಲಾರಂಭಿಸಿತು. ಎಲ್ಲರೂ ಹೊರಗಿದ್ದಾಗ ತುಳಸಿ ಮಹಾರಾಜರೊಬ್ಬರು ಮಾತ್ರ ಶ್ರೀರಾಮಕೃಷ್ಣರ ನಿತ್ಯಪೂಜೆಯ ಫೋಟೋ ಮತ್ತು ಅವರ ಅಸ್ಥಿಸಂಪುಟವನ್ನು ಎದೆಗೆ ಒತ್ತಿಕೊಂಡು, ವಸ್ತ್ರವೊಂದರಿಂದ ಮುಚ್ಚಿಕೊಂಡು ಮಠದ ಮಧ್ಯದ ಒಳ ಅಂಗಳದಲ್ಲಿ 'ಜೈ ರಾಮಕೃಷ್ಣ' ಎಂದು ಹೇಳುತ್ತ ಅತ್ತಿಂದಿತ್ತ ತಿರುಗುತ್ತಿದ್ದರು. ಕೆಲವು ನಿಮಿಷಗಳ ನಂತರ ನಾವೆಲ್ಲ ಒಳಗೆ ಬಂದೆವು. ಸುಬೋಧ ಮಹಾರಾಜರೊಂದಿಗೆ ಹಾಸ್ಯ ಮಾಡುತ್ತ ನಾವೆಲ್ಲ ಹೇಳಿದೆವು, 'ಮಹಾರಾಜ್ ನಿಮ್ಮ ಭಾಷಣ ಅದೆಷ್ಟು ಶಕ್ತಿಯುತವಾಗಿತ್ತೆಂದರೆ, ನೀವು ಮಾತನಾಡಲು ಎದ್ದು ನಿಲ್ಲುತ್ತಿದ್ದಂತೆಯೇ ಭೂಮಿಯು ಸಾಗರ ಸಮೇತವಾಗಿ ನಡುಗಿಬಿಟ್ಟಿತು!' ಅವರು ನಕ್ಕುಬಿಟ್ಟರು.''

ನೀಲಾಂಬರ ಬಾಬುವಿನ ಮನೆಗೆ ಮಠವು ಸ್ಥಳಾಂತರವಾದ ಕೆಲವು ತಿಂಗಳ ನಂತರ ಸ್ವಾಮೀಜಿಯವರ ಭಾವಧಾರೆಯಿಂದ ಆಕರ್ಷಿತನಾದ ಅನೇಕ ಗುಣಸಂಪನ್ನನಾದ ಬ್ರಾಹ್ಮಣ ಯುವಕನೊಬ್ಬನು ಮಠವನ್ನು ಸೇರಿದ. ಹೆಸರು ಅಜಯಹರಿ ಬಂದ್ಯೋಪಾಧ್ಯಾಯ. ಸ್ವಾಮೀಜಿಯವರು ಆ ಯುವಕನೊಂದಿಗೆ ಮಾತನಾಡಿ ಆತನ ಸಚ್ಚಾರಿತ್ರ್ಯ, ಪ್ರಬಲ ವೈರಾಗ್ಯ, ಮೇಧಾಶಕ್ತಿ, ವಿನಯ ಮತ್ತು ಪಾಂಡಿತ್ಯವನ್ನು ಬಹಳ ಮೆಚ್ಚಿದರು. ಸಂತೋಷದಿಂದ ೧೮೯೮ರ ಮಾರ್ಚ್ ೨೯ರಂದು ಆತನಿಗೆ ಸಂನ್ಯಾಸದೀಕ್ಷೆಯನ್ನು ಕೊಟ್ಟು, 'ಸ್ವರೂಪಾನಂದ' ಎಂಬ ಹೆಸರನ್ನಿತ್ತರು. ಇಷ್ಟರಲ್ಲಿ ಲಂಡನ್ನಿನಿಂದ ಮಾರ್ಗರೆಟ್ ನೋಬಲ್ (ಸೋದರಿ ನಿವೇದಿತಾ) ಮತ್ತು ಅಮೇರಿಕಾದಿಂದ ಮಿಸೆಸ್ ಓಲೆ ಬುಲ್ (ಧೀರಮಾತಾ), ಮಿಸ್ ಜೋಸೆಫಿನ್ ಮ್ಯಾಕ್‌ಲಿಯಾಡ್ (ಜಯಾ) ಎಂಬ ಸ್ವಾಮೀಜಿಯವರ ಪಾಶ್ಚಾತ್ಯ ಶಿಷ್ಯೆಯರು ಸ್ವಾಮೀಜಿಯವರ ಕೆಲಸದಲ್ಲಿ ನೆರವಾಗಲು ಭಾರತಕ್ಕೆ ಬಂದುಬಿಟ್ಟಿದ್ದರು. ಈಗಾಗಲೇ ಬೇಲೂರು ಮಠದ ಭೂಮಿಯನ್ನು ಕೊಂಡುಕೊಳ್ಳಲಾಗಿತ್ತು. ಶೀಘ್ರವೇ ಅಲ್ಲಿ ಮಠದ ಕಟ್ಟಡ ನಿರ್ಮಾಣಕಾರ್ಯವು ಆರಂಭವಾಗಲಿತ್ತು. ಅಲ್ಲೊಂದು ಹಳೆಯ ಮನೆಯಿತ್ತು. ಆ ಮೂವರು ಶಿಷ್ಯೆಯರ ನಿವಾಸದ ವ್ಯವಸ್ಥೆಯನ್ನು ಅಲ್ಲಿಯೇ ಮಾಡಲಾಗಿತ್ತು. ಅಜಯಹರಿಗೆ ಸಂನ್ಯಾಸದೀಕ್ಷೆ ಕೊಟ್ಟಂದು ಮಧ್ಯಾಹ್ನ ಧೀರಾಮಾತಾ ಮುಂತಾದವರೊಂದಿಗೆ ಮಾತನಾಡುತ್ತಾ ಸ್ವಾಮೀಜಿಯವರು— ''we have made an acquisition today'' (ನಾವಿಂದು ಒಂದು ಅನರ್ಘ್ಯರತ್ನವನ್ನು ಸಂಪಾದಿಸಿದ್ದೇವೆ) ಎಂದಿದ್ದರು. ಸೋದರಿ ನಿವೇದಿತೆಗೆ ಬಂಗಾಳಿ ಭಾಷೆಯನ್ನು ಕಲಿಸುವ ಜವಾಬ್ದಾರಿಯನ್ನು ಸ್ವಾಮೀಜಿಯವರು ಸ್ವಾಮಿ ಸ್ವರೂಪಾನಂದರಿಗೆ ವಹಿಸಿದ್ದರು. ಸ್ವಾಮಿ ಸ್ವರೂಪಾನಂದರು ನಿಜಕ್ಕೂ ಸಂನ್ಯಾಸಿರತ್ನ. ೨೬ ವರ್ಷಕ್ಕೆ ಮಠಕ್ಕೆ ಸೇರಿ, ಕೇವಲ ೮ ವರ್ಷ ಮಾತ್ರ ಬದುಕಿದ್ದರು. ಆ ಎಂಟು ವರ್ಷಗಳಲ್ಲಿ ಅವರ ಆಧ್ಯಾತ್ಮಿಕ ಕ್ಷೇತ್ರ ಮತ್ತು ಕರ್ಮಕ್ಷೇತ್ರಗಳಲ್ಲಿ ನಡೆದ ವಿಸ್ಮಯಕರವಾದ ವಿಕಾಸವು ಶ್ರೀರಾಮಕೃಷ್ಣ ಮಠ ಮತ್ತು ಮಿಷನ್ನಿನ ಇತಿಹಾಸದಲ್ಲೇ ಒಂದು ಗೌರವಚಿಹ್ನೆಯನ್ನು ಮೂಡಿಸಿತ್ತು. ಸ್ವಾಮಿ ವಿರಜಾನಂದರ ಕಾರ್ಯಕ್ಷೇತ್ರವು ಸ್ವಾಮಿ ಸ್ವರೂಪಾನಂದರೊಂದಿಗೆ ಗಾಢವಾಗಿ ಹೆಣೆದಿತ್ತು ಎಂಬುದನ್ನು ಮುಂದೆ ನೋಡಬಹುದು.

ಸ್ವಾಮಿ ಸ್ವರೂಪಾನಂದರಿಗೆ ಸಂನ್ಯಾಸ ಕೊಡುವ ನಾಲ್ಕು ದಿನಗಳ ಮೊದಲೇ ಸ್ವಾಮೀಜಿಯವರು ಮಾರ್ಗರೆಟ್ ನೋಬಲ್‌ಗೆ ಬ್ರಹ್ಮಚರ್ಯ ದೀಕ್ಷೆಯನ್ನು ಕೊಟ್ಟಿದ್ದರು. (ಮಾರ್ಚ್ ೨೫, ೧೮೯೮). ಈ ವ್ರತಧಾರಿಣಿಯ ಹೆಸರನ್ನು 'ನಿವೇದಿತಾ' ಎಂದಿಟ್ಟರು. ಇದಾದ ಕೆಲವು ದಿನಗಳ ನಂತರ ಕಠಿಣ ಪರಿಶ್ರಮದಿಂದ ಬಳಲಿದ್ದ ಸ್ವಾಮೀಜಿ ವೈದ್ಯರ ಸಲಹೆಯ ಮೇರೆಗೆ ಹವಾ ಬದಲಾವಣೆಗಾಗಿ ಡಾರ್ಜಿಲಿಂಗಿಗೆ ಹೋದರು. ಆದರೆ ಅಲ್ಲೂ ಸಹ ಹೆಚ್ಚು ದಿನ ಉಳಿದುಕೊಳ್ಳಲಾಗಲಿಲ್ಲ. ಕೊಲ್ಕತ್ತೆಯಲ್ಲಿ ಹರಡುತ್ತಿದ್ದ ದಾರುಣವಾದ ಪ್ಲೇಗಿನ ಸುದ್ದಿ ಕೇಳಿ ರೋಗಪೀಡಿತರಿಗೆ ಪರಿಹಾರ ಕಾರ್ಯವನ್ನು ಕೈಗೊಳ್ಳಲು ಬೇಗನೆ ಮಠಕ್ಕೆ ಹಿಂತಿರುಗಿದರು. ಈ ಸಂದರ್ಭದಲ್ಲಿ ಸ್ವಾಮೀಜಿಯವರ ಅಗಾಧ ಅನುಕಂಪೆಯನ್ನು ವಿಶಾಲ ಹೃದಯವನ್ನು ಸ್ವಲ್ಪ ಮಟ್ಟಿಗೆ ತಿಳಿದುಕೊಳ್ಳುವ ಸೌಭಾಗ್ಯ ಸ್ವಾಮಿ ವಿರಜಾನಂದರದಾಗಿತ್ತು. ಈ ದೊಡ್ಡ ಸೇವಾಕಾರ್ಯಕ್ಕೆ ಹಣ ಎಲ್ಲಿಂದ ಬರುವುದು ಎಂದು ಗುರುಭಾಯಿಗಳೊಬ್ಬರು ಕೇಳಿದಾಗ ಸ್ವಾಮೀಜಿ, ''ಏಕೆ? ಅಗತ್ಯಬಿದ್ದರೆ ಹೊಸ ಮಠಕ್ಕೆಂದು ಕೊಂಡುಕೊಂಡಿರುವ ಜಮೀನನ್ನು ಮಾರಿಬಿಡುವೆ'' ಎಂದಿದ್ದರು. ಇದಲ್ಲದೆ ಸ್ವಾಮಿ ವಿರಜಾನಂದರು ಗಮನಿಸಿದ್ದೇನೆಂದರೆ,

ಸ್ವಾಮೀಜಿಯವರ ಮಾನಸಪುತ್ರಿ, ವ್ರತಧಾರಿಣಿ ಸೋದರಿ ನಿವೇದಿತೆಯ ಅದ್ಭುತ ಸೇವಾಮನೋಭಾವವನ್ನು. ಅಪೂರ್ವ ದೃಢತೆ, ಅಚಲನಿಷ್ಠೆಗಳೊಂದಿಗೆ ಈ ವಿದೇಶಿ ನಾರಿಯು ಮಠದ ಸಂನ್ಯಾಸಿಗಳೊಂದಿಗೆ ಬಾಘ್‌ಬಜಾರಿನ ಗಲ್ಲಿಗಲ್ಲಿಗಳಲ್ಲಿ ಮಹಾಮಾರಿ ಪ್ಲೇಗ್‌ನಿಂದ ಪೀಡಿತರಾದ ಜನರ ಸೇವೆಯಲ್ಲಿ ತಮ್ಮನ್ನು ತಾವು ಸಮರ್ಪಿಸಿಕೊಂಡದ್ದನ್ನು ಅವರು ನೋಡಿದರು.

ಸ್ವಾಮೀಜಿಯವರು ದಾರ್ಜಿಲಿಂಗಿನಲ್ಲಿದ್ದಾಗ ಸ್ವಾಮಿ ವಿರಜಾನಂದರು ಮಠದ ಚರ್ಚಾಸಭೆಯಲ್ಲಿ ಒಂದು ದಿನ renunciation (ತ್ಯಾಗ) ಬಗ್ಗೆ ತಮ್ಮ ಪ್ರಬಂಧವನ್ನು ಓದಿದ್ದರು. ಅದರ ಭಾವ ಮತ್ತು ಭಾಷೆಗಳೆರಡೂ ಉತ್ಕೃಷ್ಟವಾಗಿದ್ದವು. ಕೊಲ್ಕತ್ತೆಯಲ್ಲಿ ಪ್ಲೇಗಿನ ಪ್ರಕೋಪವು ಕಡಿಮೆಯಾದ ಮೇಲೆ ಸ್ವಾಮೀಜಿಯವರು ಸ್ವಾಮಿ ತುರೀಯಾನಂದ, ನಿರಂಜನಾನಂದ, ಸದಾನಂದ, ಸ್ವರೂಪಾನಂದ ಮತ್ತು ತಮ್ಮ ಪಾಶ್ಚಾತ್ಯ ಶಿಷ್ಯೆಯರೊಡಗೂಡಿ (ಧೀರಾಮಾತಾ, ಜಯಾ ಮತ್ತು ನಿವೇದಿತಾ) ೧೮೯೮ರ ಮೇ ೧೧ರಂದು ಆಲ್ಮೋರಕ್ಕೆ ಹೊರಟರು. ಕೊಲ್ಕತ್ತದಲ್ಲಿದ್ದ ಅಮೆರಿಕಾದವರಾದ ಕೌನ್ಸಿಲ್ ಜನರಲ್‌ನ ಪತ್ನಿ ಮಿಸೆಸ್ ಪ್ಯಾಟರ್‌ಸನ್ ಸಹ ಇವರೊಂದಿಗೆ ಪ್ರಯಾಣಿಸಿದರು. ಅಮೇರಿಕೆಯಲ್ಲೊಮ್ಮೆ ಸ್ವಾಮೀಜಿಯವರು 'ಬಿಳಿಯರಲ್ಲ' ಎಂಬ ಕಾರಣದಿಂದ ಹೋಟೆಲೊಂದರಲ್ಲಿ ಪ್ರವೇಶ ಪಡೆಯದಿದ್ದಾಗ ಈ ಮಹಿಳೆಯು ಅವರನ್ನು ತುಂಬ ಆದರಪೂರ್ವಕವಾಗಿ ತಮ್ಮ ಮನೆಗೆ ಕರೆತಂದು ಆತಿಥ್ಯ ನೀಡಿದ್ದರು. ಆಗಿನಿಂದಲೂ ಈಕೆಗೆ ಸ್ವಾಮೀಜಿಯೆಂದರೆ ತುಂಬ ಶ್ರದ್ಧೆ ಹಾಗೂ ಪೂಜ್ಯಭಾವವಿತ್ತು.

ಸ್ವಾಮೀಜಿಯವರು ಆಲ್ಮೋರಕ್ಕೆ ಹೋದ ನಂತರ ಸ್ವಾಮಿ ವಿರಜಾನಂದರು ಸ್ವಾಮಿ ಶಿವಾನಂದರೊಂದಿಗೆ ದಾರ್ಜಿಲಿಂಗ್‌ಗೆ ಹೋಗಿ (೨೨ ಮೇ, ೧೮೯೮) ಸುಮಾರು ಒಂದೂವರೆ ತಿಂಗಳು ಅಲ್ಲಿದ್ದರು. ಜುಲೈ ೧೧ರಂದು ಮಠಕ್ಕೆ ಹಿಂತಿರುಗಿದರು. ಮಹಾಪುರುಷ್ ಮಹಾರಾಜರು (ಸ್ವಾಮಿ ಶಿವಾನಂದರು) ನಾಲ್ಕು ತಿಂಗಳ ನಂತರ ಹಿಂತಿರುಗಿದರು. ಆಲ್ಮೋರ ಮತ್ತು ಕಾಶ್ಮೀರ ಪರ್ಯಟನೆ ಮುಗಿಸಿ ಸ್ವಾಮೀಜಿಯವರು ಒಂದು ದಿನ ಅನಿರೀಕ್ಷಿತವಾಗಿ ಮಠಕ್ಕೆ ಆಗಮಿಸಿದರು (೧೮ ಅಕ್ಟೋಬರ್ ೧೮೯೮). ಅವರ ಶರೀರ ಬಹಳ ಅಸ್ವಸ್ಥಗೊಂಡಿತ್ತು. ಅದಲ್ಲದೆ, ಕಾಶ್ಮೀರದಲ್ಲಿ ಅಮರನಾಥ ಮತ್ತು ಕ್ಷೀರಭವಾನಿಯ ದರ್ಶನದ ನಂತರ ಒಂದು ರೀತಿ ಗಂಭೀರ ಸ್ತಬ್ಧಭಾವ ಅವರ ಮನಸ್ಸನ್ನು ಆವರಿಸಿತ್ತು—ಮಠಕ್ಕೆ ಬಂದ ನಂತರವೂ ಆ ಭಾವ ಮುಂದುವರಿದಿತ್ತು. ಮೂರು ನಾಲ್ಕು ದಿನಗಳ ನಂತರ ಅವರ ಗೃಹೀ ಶಿಷ್ಯರಾದ ಶರಚ್ಚಂದ್ರರು ಅವರ ದರ್ಶನಕ್ಕೆ ಬಂದಾಗ ನೋಡಿದ್ದೇನೆಂದರೆ: ''ಸ್ವಾಮೀಜಿ ಮುಕ್ತ ಪದ್ಮಾಸನದಲ್ಲಿ ಪೂರ್ವಾಭಿಮುಖವಾಗಿ ಕುಳಿತಿದ್ದಾರೆ, ಆಳವಾದ ಧ್ಯಾನದಲ್ಲಿ ಮಗ್ನರಾದಂತೆ. ಮುಖದಲ್ಲಿ ನಗುವಿಲ್ಲ, ಆ ಪ್ರದೀಪ್ತ ನಯನಗಳಲ್ಲಿ ಬಹಿರ್ದೃಷ್ಟಿ ಇಲ್ಲ, ತಮ್ಮೊಳಗೇ ಏನನ್ನೋ ನೋಡುವಂತಿದೆ.'' ಶರಚ್ಚಂದ್ರನನ್ನು ನೋಡಿದ ಸ್ವಾಮೀಜಿ, ''ಅಮರ



ಸ್ವಾಮಿ ಶಿವಾನಂದರು

ನಾಥನ ದರ್ಶನದಾರಭ್ಯ ನನ್ನ ತಲೆಯಲ್ಲಿ ಇಪ್ಪತ್ತನಾಲ್ಕು ಗಂಟೆಯೂ ಶಿವನೇ ತುಂಬಿಕೊಂಡಿರುವಂತಿದೆ. ಏನು ಮಾಡಿದರೂ ಇಳಿಯುತ್ತಿಲ್ಲ'' ಎಂದರು. *(Life of Swami Vivekananda, Vol. 2, p.390.)*

ಈ ಸಮಯದಲ್ಲಿ ಸ್ವಾಮಿ ವಿರಜಾನಂದರಿಗೆ ಸ್ವಾಮೀಜಿಯವರ ವೈಯಕ್ತಿಕ ಸೇವೆ ಮಾಡುವ ಸೌಭಾಗ್ಯ ಲಭಿಸಿತು. ಚಿಕಿತ್ಸಾ ಸೌಲಭ್ಯಕ್ಕಾಗಿ ಸ್ವಾಮೀಜಿಯವರು ಕೊಲ್ಕತ್ತೆಯ ಬಾಘ್ ಬಜಾರಿನ ಬಲರಾಮ ಬಾಬುವಿನ ಮನೆಯಲ್ಲಿದ್ದರು. ಆಗಾಗ ಮಠಕ್ಕೆ ಬರುತ್ತಿದ್ದರು. ೧೮೯೮ರ ನವೆಂಬರ್ ೧೩ ಸ್ವಾಮಿ ವಿರಜಾನಂದರಿಗೆ ಅವಿಸ್ಮರಣೀಯ ದಿನ. ಅಂದು ಕಾಳೀಪೂಜೆ. ಶ್ರೀಮಾತೆ ತಾವು ದಿನನಿತ್ಯ ಪೂಜಿಸುತ್ತಿದ್ದ ಶ್ರೀರಾಮಕೃಷ್ಣರ ಫೋಟೋದೊಂದಿಗೆ ಆಗ ನಿರ್ಮಾಣವಾಗುತ್ತಿದ್ದ ಬೇಲೂರು ಮಠವನ್ನು ನೋಡಲು ಬಂದಿದ್ದರು. ತಾತ್ಕಾಲಿಕ ಮಠವಾಗಿದ್ದ ನೀಲಾಂಬರ ಬಾಬುವಿನ ಮನೆಯ ದೇವರ ಮನೆಯಿಂದ ಶ್ರೀರಾಮಕೃಷ್ಣರ ಪಟವನ್ನೂ ಹೊಸ ಕಟ್ಟಡಕ್ಕೆ ತರಲಾಯಿತು. ಶ್ರೀಮಾತೆಯವರೇ ಸ್ವತಃ ಪೂಜೆಗೆ ಕುಳಿತರು, ಅನಂತರ ಮಠಕ್ಕೆ ಹಿಂತಿರುಗಿ ಬಂದು ದೇವರ ಮನೆಯಲ್ಲಿ ನೈವೇದ್ಯ ಮಾಡಿದರು. ಮಠದಲ್ಲಿ ಪ್ರಸಾದ ಸ್ವೀಕರಿಸಿ ಸಂಜೆಯ ವೇಳೆಗೆ ಶ್ರೀಮಾತೆಯವರೂ ಅವರ ಸ್ತ್ರೀ ಸಂಗಡಿಗರೂ ಕೊಲ್ಕತ್ತದ ಬಾಘ್ ಬಜಾರಿನ ಸೋದರಿ ನಿವೇದಿತೆಯ 'ಬಾಲಿಕಾ ವಿದ್ಯಾಲಯ'ದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲು ಹೋದರು. ಅಲ್ಲಿ ಸ್ವಾಮೀಜಿ, ಸ್ವಾಮಿ ಬ್ರಹ್ಮಾನಂದರು ಮತ್ತು ಸ್ವಾಮಿ ಶಾರದಾನಂದರು ಉಪಸ್ಥಿತರಿದ್ದರು.

ಇದಾದ ನಂತರ ೧೮೯೮ನೇ ಇಸವಿಯ ಡಿಸೆಂಬರ್ ೯ ರಂದು ಬರೆದ ಅವಿಸ್ಮರಣೀಯ ಸ್ಮೃತಿ ಹೀಗಿದೆ:

‘‘ಅಂದು ಬೇಲೂರು ಮಠದ ಸ್ಥಾಪನೆ. ಸ್ವಾಮೀಜಿಯವರು ಪ್ರಾತಃಕಾಲದಲ್ಲಿ ಎದ್ದು, ಗಂಗಾಸ್ನಾನ ಮಾಡಿ, ಶ್ರೀರಾಮಕೃಷ್ಣರ ಪಾದುಕೆಗಳಿಗೆ ಬಿಲ್ವಪತ್ರೆ ಮತ್ತು ಪುಷ್ಪಾಂಜಲಿ ಸಮರ್ಪಿಸಿ, ಶ್ರೀರಾಮಕೃಷ್ಣರ ಭಸ್ಮಾಸ್ಥಿಗಳನ್ನಿಟ್ಟ ತಾಮ್ರಸಂಪುಟವನ್ನು (ಆತ್ಮಾರಾಮನ ಸ್ಥಾಲಿ) ತಮ್ಮ ಬಲಹೆಗಲಿನ ಮೇಲಿಟ್ಟುಕೊಂಡು, ಸಾಧು, ಬ್ರಹ್ಮಚಾರಿ ಹಾಗೂ ಭಕ್ತರೊಂದಿಗೆ ನೀಲಾಂಬರ ಬಾಬುವಿನ ಉದ್ಯಾನಮನೆಯಿಂದ ಹೊಸ ಮಠಕ್ಕೆ ಹೊತ್ತು ತಂದರು. ಶಂಖ–ಘಂಟೆಗಳ ನಿನಾದದಿಂದ ಗಂಗಾತಟವು ಅನುರಣಿತವಾಗುತ್ತಿತ್ತು.

‘‘ದಾರಿಯಲ್ಲಿ ಶಿಷ್ಯನಾದ ಶರಚ್ಚಂದ್ರ ಚಕ್ರವರ್ತಿಗೆ ಸ್ವಾಮೀಜಿ ಹೇಳಿದರು: ‘ಶ್ರೀರಾಮಕೃಷ್ಣರು ನನಗೆ ಹೇಳಿದ್ದರು, ‘ನೀನು ಹೆಗಲ ಮೇಲಿಟ್ಟುಕೊಂಡು ನನ್ನನ್ನು ಎಲ್ಲೆಲ್ಲಿಗೆ ಕರೆದೊಯ್ಯುವೆಯೋ ನಾನು ಅಲ್ಲಿಗೆ ಬರುವೆ. ಅದು ಮರದ ಬುಡವಾದರೂ ಆಗಿರಲಿ, ಕುಟೀರವೇ ಆಗಿರಲಿ, ಅಲ್ಲೇ ನೆಲೆಸುವೆ’ ಎಂದು. ಆದ್ದರಿಂದಲೇ ಇಂದು ನಾನೇ ಸ್ವತಃ ಅವರನ್ನು ಹೆಗಲ ಮೇಲಿಟ್ಟುಕೊಂಡು ಹೊಸ ಮಠಕ್ಕೆ ಕೊಂಡೊಯ್ಯುತ್ತಿರುವೆ. ಬಹುಕಾಲದವರೆಗೆ ಶ್ರೀರಾಮಕೃಷ್ಣರು ‘ಬಹುಜನ ಹಿತಾಯ’ ಇಲ್ಲಿಯೇ ಸ್ಥಿರವಾಗಿ ನೆಲೆಸುವರೆಂಬುದನ್ನು ಖಂಡಿತವಾಗಿಯೂ ತಿಳಿದುಕೋ.’

‘‘ಅಂದು ಸ್ವಾಮೀಜಿಯವರೇ ಸ್ವತಃ ಪೂಜೆ–ಹೋಮಗಳನ್ನು ಮಾಡಿದ್ದರು. ಗುರುಭಾಯಿಗಳ ಸಹಾಯದಿಂದ ತಾವೇ ಪಾಯಸಾನ್ನವನ್ನು ತಯಾರಿಸಿ ಠಾಕೂರರಿಗೆ ನಿವೇದಿಸಿದ್ದರು.

‘‘ಡಿಸೆಂಬರ್ ೯ರಂದು ಮಠವು ಹೊಸ ನಿವೇಶನದಲ್ಲಿ ಪ್ರತಿಷ್ಠಾಪನೆಯಾದ ಮೇಲೆ ಕೆಲವು ಸಂನ್ಯಾಸಿಗಳು ಅಲ್ಲಿ ವಾಸ ಮಾಡಲಾರಂಭಿಸಿದರು. ಆದರೆ ನೀಲಾಂಬರ ಬಾಬುವಿನ ತೋಟದಿಂದ ಮಠವು ಪೂರ್ತಿಯಾಗಿ ವರ್ಗಾವಣೆಯಾದದ್ದು ಇನ್ನೂ ಮೂರು ವಾರಗಳ ನಂತರವೇ; ೧೮೯೯ರ ಜನವರಿ ೧ರಂದು. ಬೇಲೂರು ಮಠದ ಸ್ಥಾಪನೆಯ ಹತ್ತು ದಿನಗಳ ನಂತರ (೧೮೯೮ರ ಡಿಸೆಂಬರ್ ೧೯ರಂದು) ಸ್ವಾಮೀಜಿಯವರು ಹವಾ ಬದಲಾವಣೆಗಾಗಿ ಕೆಲವು ದಿನಗಳ ಮಟ್ಟಿಗೆ ದೇವಘರಕ್ಕೆ ಹೋದರು. ಅವರ ಜೊತೆಯಲ್ಲಿ ಬ್ರಹ್ಮಚಾರಿ ಹರೇಂದ್ರನಾಥರೂ (ನಾದು) ಇದ್ದರು. ಅಲ್ಲಿ ಸ್ವಾಮೀಜಿ ಶ್ರೀರಾಮಕೃಷ್ಣರ ಭಕ್ತರಾದ ಪ್ರಿಯನಾಥ ಮುಖ್ಯೋಪಾಧ್ಯಾಯರ ಆತಿಥ್ಯವನ್ನು ಸ್ವೀಕರಿಸಿದರು. (ಒಂದು ವರ್ಷದ ಹಿಂದೆ ವಿರಜಾನಂದರೂ ಇವರ ಮನೆಯಲ್ಲಿಯೇ ಇದ್ದುಕೊಂಡು ದೇವಘರದ ದುರ್ಭಿಕ್ಷ ಪರಿಹಾರ ಕಾರ್ಯವನ್ನು ನೆರವೇರಿಸಿದ್ದರು.) ದೇವಘರದಲ್ಲಿ ಸ್ವಾಮೀಜಿಯವರು ಆಸ್ತಮಾದಿಂದ ತುಂಬ ಕಷ್ಟಪಟ್ಟರು. ಅನೇಕ ಬಾರಿ ಶ್ವಾಸವು ನಿಂತೇ ಹೋಗುತ್ತಿತ್ತು. ಅವರೇ ಮುಂದೊಮ್ಮೆ ಹೇಳಿದಂತೆ, ಆಗ ಅವರು ಎತ್ತರವಾದ ದಿಂಬಿಗೆ ಒರಗಿ ಮೃತ್ಯುವಿನ ನಿರೀಕ್ಷೆ ಮಾಡತೊಡಗಿದರು. ಒಳಗಿನಿಂದ ‘ಸೋऽಹಂ ಸೋऽಹಂ’ ಎಂಬ ನಾದವು ಅನವರತ ಏಳುತ್ತಿತ್ತು. ಅದರೊಂದಿಗೆ ಉಪನಿಷತ್ತಿನ ಮಂತ್ರವೊಂದು ‘ಏಕಮೇವಾऽದ್ವಿತೀಯಂ ಬ್ರಹ್ಮ, ನೇಹ ನಾನಾಸ್ತಿ ಕಿಂಚನ’ (ಕೇವಲ ಅದ್ವಿತೀಯ ಬ್ರಹ್ಮನೊಬ್ಬನೇ ಇರುವುದು, ಇಲ್ಲಿ ನಾನಾ ಪ್ರಕಾರದ್ದು ಯಾವುದೂ ಇಲ್ಲ) ಎಂದು ಧ್ವನಿಸುತ್ತಿರುವಂತೆಯೂ ಅನುಭವವಾಯಿತು.’’

ಸ್ವಾಮೀಜಿಯವರು ದೇವಘರದಿಂದ ಹಿಂತಿರುಗಿದರು. ಅವರನ್ನು ಢಾಕಾದ ಭಕ್ತರು ಸಂನ್ಯಾಸಿ ಪ್ರಚಾರಕರನ್ನು ಕಳುಹಿಸಬೇಕೆಂದು ಕೇಳಿಕೊಂಡಿದ್ದರು. ಆದ್ದರಿಂದ ಸ್ವಾಮಿ ವಿರಜಾನಂದ ಹಾಗೂ ಸ್ವಾಮಿ ಪ್ರಕಾಶಾನಂದರಿಗೆ ಕರೆ ಹೋಯಿತು. ಸ್ವಾಮೀಜಿಯವರು ಆಗ ಬಲರಾಮ ಮಂದಿರದಲ್ಲಿದ್ದರು. ಸ್ವಾಮಿ ಪ್ರಕಾಶಾನಂದರೇನೋ ಉತ್ಸಾಹ ತೋರಿದರು. ಆದರೆ ಸ್ವಾಮಿ ವಿರಜಾನಂದರು ಹಿಂಜರಿದರು. ಅವರು, ‘‘ಸಾಧನೆಯನ್ನೇನೂ ಮಾಡಲಿಲ್ಲ, ಭಗವಂತನನ್ನೂ ಪಡೆಯಲಿಲ್ಲ. ಏನೆಂದು ತಾನೇ ನಾನು ಭಾಷಣ ಮಾಡಲಿ?’’ ಎಂದರು.

ಅದಕ್ಕೆ ಸ್ವಾಮೀಜಿ, ‘‘ನೀನೇನೂ ಆಚಾರ್ಯನೆಂಬ ಗರ್ವದಿಂದ ಮಾತಾಡಬೇಡಪ್ಪ, ಸೇವೆಯ ಭಾವದಿಂದ ಬೇರೆ ಹತ್ತಾರು ಕೆಲಸಗಳನ್ನು ಮಾಡುವಂತೆ ಭಾಷಣವನ್ನು ಮಾಡು’’ ಎಂದರು.

ಸ್ವಾಮಿ ವಿರಜಾನಂದರು ಆಗ, ‘‘ನನಗೇನು ಗೊತ್ತಿದೆ ಅಂತ ಮಾತಾಡಲಿ?’’ ಎಂದರು. ಸ್ವಾಮೀಜಿಯವರು ಸ್ವಲ್ಪ ತಮಾಷೆಯಾಗಿ ಹೇಳಿದರು, ‘‘ಆಯ್ತಪ್ಪ, ಎದ್ದು ನಿಂತು ಹಾಗೆಂದೇ ಹೇಳು ‘ನನ ಗೇನೂ ಗೊತ್ತಿಲ್ಲ’ ಎಂದು.’’ ನಂತರ ಸ್ವಲ್ಪ ಗಂಭೀರವಾಗಿ ಹೇಳಿದರು, ‘‘ನನಗೇನೂ ಗೊತ್ತಿಲ್ಲ ಎಂದು ಹೇಳುವುದೇ ತಾನೇ ಒಂದು ದೊಡ್ಡ ಶಿಕ್ಷಣ. ‘ನನಗೆಲ್ಲಾ ಗೊತ್ತು’ ಈ ಭಾವವೇ ಅಜ್ಞಾನವಲ್ಲವೆ?’’ ಆದರೂ ಸ್ವಾಮಿ ವಿರಜಾನಂದರಿಗೆ ಧೈರ್ಯ ಬರದಿರುವುದನ್ನು ಕಂಡು ಉದ್ವಿಗ್ನರಾಗಿ, ‘‘ಇಲ್ಲಿ ನೋಡು, ಸ್ವಂತ ಮುಕ್ತಿಯನ್ನೇನಾದರೂ ಬಯಸುವೆಯೋ ನಿಶ್ಚಯವಾಗಿಯೂ ನರಕಕ್ಕೆ ಹೋಗುವೆ. ಆದರೆ ಪರರ ಮುಕ್ತಿಗಾಗಿ ದುಡಿಯುವೆಯೋ ಈ ಕ್ಷಣವೇ ಮುಕ್ತನಾಗುವೆ’’ ಎಂದು ಹೇಳಿದರು.

ಈ ಮಾತುಗಳಿಂದ ಸ್ವಾಮಿ ವಿರಜಾನಂದರು ತುಂಬ ಪ್ರಭಾವಿತರಾದರು. ಸ್ವಾಮೀಜಿಯವರ ಆದೇಶವನ್ನು ಪಾಲಿಸುವೆ ಎಂದು ಸಂಕಲ್ಪಿಸಿ ಈ ಹೊಸ ಕೆಲಸಕ್ಕಾಗಿ ಸಿದ್ಧರಾಗತೊಡಗಿದರು. ಅವರಿಬ್ಬರೂ ಢಾಕಾಗೆ ಹೋಗುವ ಮುನ್ನ ಸ್ವಾಮೀಜಿಯವರೇ ಒಂದು ದಿನ ದೇವರಮನೆಗೆ ಹೋಗಿ ಪೂಜೆಯನ್ನು ಮಾಡಿದರು. ಇಬ್ಬರನ್ನೂ ಹತ್ತಿರ ಕುಳ್ಳಿರಿಸಿ, ಮನದುಂಬಿ ಆಶೀರ್ವದಿಸಿದರು. ತಲೆಯ ಮೇಲೆ ಕೈಯಿಟ್ಟು, ‘‘ಆತನ ಶಕ್ತಿಯು ನಿಮ್ಮಲ್ಲಿ ಪ್ರವೇಶಿಸಿ ಹರಡುತ್ತಿದೆ ಎಂಬುದರಲ್ಲಿ ವಿಶ್ವಾಸವಿರಿಸಿ. ಸಂಘವೇ ಶ್ರೀರಾಮಕೃಷ್ಣರ ಸಮಷ್ಟಿ ಶರೀರವೆಂದು ತಿಳಿಯಿರಿ. ಸಂಘಕ್ಕೆ ಯಥೋಚಿತವಾದ ಶ್ರದ್ಧೆ–ನಿಷ್ಠೆ ತೋರಿ, ಸಂಘದ ಆಜ್ಞೆಯನ್ನು ಪರಿಪಾಲಿಸಿ’’ ಎಂದರು.

*(ಮುಂದುವರಿಯುವುದು)*